"ಛೇಛೇ, ಮನೆಕೆಲಸಕ್ಕೆ ಜನ ಬೇಕು ಅಂತ ಅವಳನ್ನ ಕರ್ಕೊಂಡ್ಹೋಗೋದಾ? ನೋಡಿದೋರು ಏನಂದ್ಕಂತಾರೆ?"

"ಏನಂತಾರೆ? ಏನೂ ಅನ್ನಲ್ಲ. ನಮ್ಮನೆ ಸಮಾಚಾರಾನಪ್ಪಾ..."

"ಬೆಂಗಳೂರು ಸಿಟಿ ಅಂದ್ರೆ ಗೊತ್ತಿಲ್ಲ ನಿಮ್ಗೆ. ಎಲ್ರಿಗೂ ಇಷ್ಟ ಆಗಲ್ಲ. ಹಳ್ಳೀಲಿದ್ದು ಅಭ್ಯಾಸ ಆದೋರಿಗೆ ಉಸಿರು ಕಟ್ಟುತ್ತೆ..."

ನಾಗೇಶಣ್ಣ ದೊಡ್ಡಕ್ಕೆ ಕಣ್ಣು ಬಿಟ್ಟು ಹೆದರಿಸಿರಬೇಕು. ಅಲ್ಲಿಂದ ಜಾಗ ಖಾಲಿ ಮಾಡಿದ್ದಳು ಸೌಭಾಗ್ಯ. ಅಣ್ಣ ಹೊರಟು ಹೋದಮೇಲೆ ಕಾವೇರಿಯ ಕಿವಿಯ ಮೇಲೆ ಬೀಳುವಂತೆ ನಡೆದಿತ್ತು ಗೊಣಗಾಟ,

"ಚಂದಕ್ಕೆ ಬಳೆ ತೊಟ್ಗಂಡು ಕೊಡಕಿದ್ರೆ ಬೀಳುತ್ತಾ? ಉಪಕಾರ ಮಾಡೋಕೆ ಹೋಗಿ ಕುತ್ತಿಗೆಗೆ ಕುಂಟೆ ಕಟ್ಗಂಡ್ರಿ. ಊರ ಪಾರುಪತ್ಯ ಅಂದ್ರೆ ಮತ್ತೆಂತದು?"

"ಅವಳನ್ನೇನು ಬೀದೀಲಿ ಬಿಸಾಕೋಕೆ ಬರ್ತಿತ್ತನೇ? ಕಣ್ಣಲ್ಲಿ ರಕ್ತ ಉಂಟಾ ನಿಂಗೆ?"

"ನೀವೊಬ್ರು ಮಾತ್ರಾ ಅಣ್ಣಾನಾ? ಅವರಿರ್ಲಿಲ್ವಾ, ಹೆಸರಿಗೆ ದೊಡ್ಡೋರು ಅನ್ನಿಸ್ಕೊಂಡೋರು?"

"ಆದ್ರೆ ಅವನ ಅನ್ನ ಅವನು ದುಡ್ಕಂಡು ತಿಂತಿದಾನೆ. ಅಪ್ಪನ ಆಸ್ತಿ ಅನುಭವಿಸ್ತಿರೋರು ನಾವು. ಮನೆಮಗಳಿಗೆ ಅದರಲ್ಲಿ ಪಾಲಿಲ್ವಾ?"

"ಪಾಲಿನ ಮಾತಾಡ್ತೀರಾ? ಕೊಡಿ, ಕೊಟ್ಬಿಡಿ. ನಿಮ್ಮ ಪಾಲಿಂದೂ ಸೇರಿಸಿ ಕೊಟ್ಬಿಡಿ. ನನ್ನ ಹೊಟ್ಟೇಲಿ ಹುಟ್ಟಿದ್ದಕ್ಕೆ ನನ್ನ ಮಕ್ಕಳು ನಾಕು ಮನೆ ಚಾಕರಿ ಮಾಡಿ ಹೊಟ್ಟೆ ತುಂಬಿಸ್ಕಳ್ಲಿ."

''ಈಗೇನಾಗಿದೆ ಅಂತ ಬಾಯಿ ಬೊಂಬಾಯಿ ಮಾಡ್ತಿ? ಹಿಂಗೇ ಆದ್ರೆ ಹುಚ್ಚು ಹಿಡಿಯುತ್ತೆ ನಿಂಗೆ..."

"ಹಿಡಿಯೋಕೆ ಏನು ಉಳ್ಕಂಡಿದೆ? ಯಾವತ್ತು ನಿಮ್ಮ ಕೈ ಹಿಡಿದು ಈ ಮನೆ ಹೊಸಿಲು ದಾಟಿ ಬಂದ್ನೋ ಅವತ್ತೇ ಶುರುವಾಯ್ತು ಹುಚ್ಚು..."

ತನ್ನಿಂದಾಗಿ ಆ ಮನೆಯಲ್ಲಿ ಸದಾ ನಡೆಯುತ್ತಿದ್ದ ಜಗಳ, ರಾದ್ಧಾಂತಗಳನ್ನು ಕಣ್ಣಾರೆ ಕಾಣುತ್ತಿದ್ದ ಕಾವೇರಿ ಕೈಯಾರೆ ಜೀವ ಕಳೆದುಕೊಂಡು ಈ ನರಕದಿಂದ ಪಾರಾಗಬೇಕೆಂದು ಅಂದುಕೊಂಡಿದ್ದು ಅದೆಷ್ಟು ಸಲವೋ? ಆದರೆ ಹಾಗೆ ಜೀವ ತೆಗೆದುಕೊಳ್ಳುವುದಕ್ಕೂ ಧೈರ್ಯ ಬೇಕು. ತನ್ನಂತಾ ಹೇಡಿಗಳಿಂದ ಅದು ಸಾಧ್ಯವಿಲ್ಲ. ಹಾಗೆ ಸಾಯುವುದಾರೆ ಯಾವತ್ತೋ ಸಾಯಬೇಕಿತ್ತು. ಅಂದಿದ್ದಲ್ಲಾ ಅನ್ನಿಸಿಕೊಂಡು ಭಂಡಬಾಳು ಬದುಕಬೇಕಾಗಿರಲಿಲ್ಲ. ಇಷ್ಟಕ್ಕೂ ತನ್ನನ್ನು ಕಂಡರೆ ಅತ್ತಿಗೆ ಯಾಕೆ ಉರಿದುರಿದು ಬೀಳುತ್ತಾಳೆ ಎಂದು ಕೇಳಿಕೊಂಡರೆ ಅದಕ್ಕೆ ಸಕಾರಣ ಗೊತ್ತಾಗುವುದಿಲ್ಲ. ಅವಳಾಗಿ ಕಾಲು ಕೆರೆದುಕೊಂಡು ಬಂದರೂ ತಾನು ಅವಳೊಡನೆ ವಾಗ್ವಾದಕ್ಕಿಳಸುವುದಿಲ್ಲ. 'ಬಡವಾ, ನೀ ಮಡಗಿದ ಹಾಗಿರು' ಎನ್ನುವಂತೆ ಬಾಯಿಗೆ ಕಡುಬು ತುಂಬಿಕೊಂಡು, ಅಂದಿದ್ದನ್ನೆಲ್ಲಾ ತೆಪ್ಪಗೆ ಅನ್ನಿಸಿಕೊಳ್ಳುತ್ತೇನೆ. ಹೀಗೆ ಅನ್ನಿಸಿಕೊಳ್ಳುವುದರಿಂದಲೇ ಅತ್ತಿಗೆಗೆ ಮೈ ಪರಚಿಕೊಳ್ಳುವಂತಾ ಸಿಟ್ಟು ನೆತ್ತಿಗೇರುವುದಾ? ತಾನು ಅವಳ ಸಿಟ್ಟು, ಸೆಡವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವಗಣಿಸುತ್ತೇನೆಂದು ಅನಿಸುತ್ತದೆಯಾ? ಇಷ್ಟಕ್ಕೂ ಅತ್ತಿಗೆಗೆ ತನ್ನ ಮೇಲೆ ಯಾಕೆ ಈ ಪರಿಯ ದ್ವೇಷ? ತಾನು ಉಣ್ಣುವ ಒಂದು ಮುಷ್ಟಿ ಅನ್ನ, ವರ್ಷಕ್ಕೆ ತೆಗೆಸಿಕೊಡುವ ಎರಡು ಜಡ್ಡು ಸೀರೆಗಳು ಮೈಮುರೀ ಗೆಯ್ಯುವ ತನ್ನ ದುಡಿಮೆಯೆದುರು ಯಾವ ಲೆಕ್ಕವೂ ಅಲ್ಲ. ಸತ್ಯ ಹೇಳಬೇಕೆಂದರೆ ತಿನ್ನುವುದಕ್ಕಿಂತಾ